# ಸಚಿವ ಮಧು ಬಂಗಾರಪ್ಪರಿಗೆ ಸನ್ಮಾನ: ಈಡಿಗ ಸಭೆಗೆ ಆಹ್ವಾನ

**ಅಂಕೋಲಾ:** ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಉತ್ತರ ಕನ್ನಡ ಜಿಲ್ಲಾ ಘಟಕದ ವತಿಯಿಂದ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಅವರನ್ನು ಸನ್ಮಾನಿಸಲಾಯಿತು. ಶಿರಸಿಯಲ್ಲಿ ಆಗಸ್ಟ್ 13 ರಂದು ನಡೆಯಲಿರುವ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾಮಟ್ಟದ ಚಿಂತನ-ಮಂತನ ಸಭೆಗೆ ಆಹ್ವಾನಿಸಿದರು. ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾಧ್ಯಕ್ಷ ವೀರಭದ್ರ ಆರ್. ನಾಯ್ಕ ಸಿದ್ದಾಪುರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಕೊಂಡಳ್ಳಿ ಅಂಕೋಲಾ, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಆರ್. ನಾಯ್ಕ ಸಿದ್ದಾಪುರ, ಜಿಲ್ಲಾ ಸದಸ್ಯ ಪಾಂಡುರಂಗ ನಾಯ್ಕ, ಸಿದ್ದಾಪುರ ತಾಲೂಕು ಅಧ್ಯಕ್ಷ ರಾಜೇಶ ನಾಯ್ಕ ಕತ್ತಿ, ಅನಿಲ ಕೊಠಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಿಕ್ಷಣ ಕ್ಷೇತ್ರಕ್ಕೆ ಪಂಚಮಸಾಲಿ ಸಮಾಜದ ಕೊಡುಗೆ ಅನನ್ಯ

**ಬ್ಯಾಡಗಿ:** ಲಿಂಗಾಯತ ಪಂಚಮಸಾಲಿ ಸಮುದಾಯ ಮೂಲತಃ ಕೃಷಿಕರಾಗಿದ್ದರೂ ಶೈಕ್ಷಣಿಕ ಕ್ಷೇತ್ರಕ್ಕೆ ಅವರ ಕೊಡುಗೆ ದೊಡ್ಡದು. ಒಂದು ವೇಳೆ ಅವರ ನಿಸ್ವಾರ್ಥ ಸೇವೆ ಕೊಡುಗೆ ಇರದಿದ್ದರೇ ಶಿಕ್ಷಣ, ಆರೋಗ್ಯ ಕ್ಷೇತ್ರ ಇಷ್ಟು ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ ವೆಂದು ಶಾಸಕ ಬಸವ ರಾಜ ಶಿವಣ್ಣನವರ ಅಭಿಪ್ರಾಯ ವ್ಯಕ್ತಪಡಿಸಿದರು. ತಾಲೂಕಿನ ಮಲ್ಲೂರ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ವಿದ್ಯಾರ್ಥಿಗಳಿಗೆ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

**ಹೊರೆ ಇಳಿಸಿದ ಸಮಾಜ:** ಬಹುತೇಕ ಜನರು ಸಮಾಜದ ಹೆಸರನ್ನು ಹೇಳಿಕೊಂಡು ತಮ್ಮ ಇಷ್ಟಾರ್ಥ ಈಡೇರಿಸಿಕೊಳ್ಳುವವರ ಸಂಖ್ಯೆ ಹೆಚ್ಚು, ಆದರೆ ಪಂಚಮಸಾಲಿಗಳು ಸಹಾಯ ಹಸ್ತ ನೀಡುವವರೇ ಹೊರತು ಕೈಚಾಚುವವರಲ್ಲ, ಹೀಗಾಗಿ ಸಮಾಜದ ಹಿತಕ್ಕೆ ತಮ್ಮ ಆಸ್ತಿಯನ್ನುದಾನದ ರೂಪದಲ್ಲಿ ನೀಡಿದ ಲಕ್ಷಾಂತರ ಉದಾಹರಣೆಗಳಿವೆ. ಸಮಾಜ ಒಂದರ್ಥದಲ್ಲಿ ಸರ್ಕಾರದ ಹೊರೆಯನ್ನು ಇಳಿಸಿದೆ ಎಂದರು.

ಬ್ಯಾಡಗಿ ತಾಲೂಕಿನ ಮಲ್ಲೂರ ಗ್ರಾಮದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

**ಶಿಕ್ಷಣ ಮುಂದುವರಿಸಿ:** ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಪಂಚಮಸಾಲಿಗಳು ದಾನ ಮಾಡುವುದರಲ್ಲಿ ಎತ್ತಿದ ಕೈ. ಸಹಾಯ ಹಸ್ತ ಚಾಚುವುದು ನಮ್ಮ ರಕ್ತದಲ್ಲಿದೆ. ನಾವು ಶಿಕ್ಷಣ ಪ್ರೇಮಿಗಳು ಎಂಬುದಕ್ಕೆ ಆರಂಭಿಸಿರುವ ಶೈಕ್ಷಣಿಕ ಸಂಸ್ಥೆಗಳೇ ಸಾಕ್ಷಿ, ಪ್ರತಿಭಾವಂತ ಮಕ್ಕಳಿಗೆ ಸಹಾಯ ಹಸ್ತ ಚಾಚಲು ನನ್ನನ್ನೂ ಸೇರಿದಂತೆ ಸಮುದಾಯ ಸಿದ್ಧವಿದ್ದು, ಯಾವುದೇ ಕಾರಣಕ್ಕೂ ಶಿಕ್ಷಣ ಕುಂಠಿತಗೊಳಿಸದೇ ಮುಂದುವರೆಸುವಂತೆ ಸಲಹೆ ನೀಡಿದರು.

**ಸಂವಿಧಾನ ಅವಕಾಶ:** ಹರಿಹರ ಪೀಠದ ವಚನಾನಂದ ಶ್ರೀಗಳು ಮಾತನಾಡಿ, ಶೇ.95 ರಷ್ಟು ಅಂಕ ಪಡೆದರೂ ಸರಕಾರಿ ಉದ್ಯೋಗ ಪಡೆಯುವಲ್ಲಿ ಪಂಚಮಸಾಲಿ ಕುಟುಂಬದ ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ, ಶೋಷಿತ ಜಾತಿಯ ಬಡವರಿಗೆ ಮೀಸಲಾತಿ ಕಲ್ಪಿಸಲು ಸಂವಿಧಾನದಲ್ಲೇ ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ 2ಎ ಮೀಸಲಾತಿ ಅವಶ್ಯವಿದ್ದು ಹೋರಾಟ ಅನಿವಾರ್ಯ . ಪ್ರತಿಭಾ ಪುರಸ್ಕಾರ ಪಡೆದ ಮಕ್ಕಳ ಶೈಕ್ಷಣಿಕ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

> ರಾಜ್ಯದ ಎಲ್ಲೆಡೆ ಇರುವ ಪಂಚಮಸಾಲಿ ಸಮುದಾಯದ ಶಿಕ್ಷಣ ಸಂಸ್ಥೆಗಳು ಎಲ್ಲ ವರ್ಗದ ಜನರಿಗೆ ಶೈಕ್ಷಣಿಕ ಸೌಲಭ್ಯ ಕಲ್ಪಿಸಿವೆ. ಪ್ರಮುಖವಾಗಿ ಶಿರಸಂಗಿ ಲಿಂಗರಾಜ ದೇಸಾಯಿ ಅವರ ಕನಸಿನ ಕೆಎಲ್‌ಇ ಸಂಸ್ಥೆಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಕೊಡುಗೆಯನ್ನು ಇಡೀ ವಿಶ್ವವೇ ಮೆಚ್ಚಿಕೊಂಡಿದೆ.
>
> -ಬಸವರಾಜ ಶಿವಣ್ಣನವರ , ಶಾಸಕ

**ಬೀದಿಗಿಳಿಯಬೇಕು:** ಉಪನ್ಯಾಸ ನೀಡಿದ ನಿವೃತ್ತ ಎಪಿಪಿ ಎಸ್.ವಿ.ಪಾಟೀಲ ಮಾತನಾಡಿ, ಎಲ್ಲ ವರ್ಗದ ಬಡಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ ಕೊಟ್ಟಂಥ ಪಂಚಮಸಾಲಿ ಸಮುದಾಯವೇ ಇಂದು ತಮ್ಮ ಸಮಾಜದ ಮಕ್ಕಳಿಗೆ 2ಎ ಮೀಸಲಾತಿಗೆ ಬೀದಿಗಿಳಿದಿದೆ. ಪಂಚಮ ಸಾಲಿಗಳಿಗೆ ನ್ಯಾಯ ಒದಗಿಸುವುದು ನಮ್ಮ ಉದ್ದೇಶ ಎಂದರು.

**ಪಂಚಮಸಾಲಿ ಅಸ್ಮಿತೆ:** ಜಿಲ್ಲಾಧ್ಯಕ್ಷ ನಾಗೇಂದ್ರ ಕಟಕೋಳ ಮಾತನಾಡಿ, ರಾಜ್ಯದಲ್ಲಿ ಕೋಟಿಗೂ ಅಧಿಕ ಜನಸಂಖ್ಯೆಯಿರುವ ಪಂಚಮಸಾಲಿ ಸಮಾಜಕ್ಕೆ 2ಎ ಹೋರಾಟದ ಹಿಂದೆ ರಾಜಕೀಯ ಉದ್ದೇಶವಿಲ್ಲ ಎಂದರು. ತಾಲೂಕಾಧ್ಯಕ್ಷ ತಿರಕಪ್ಪ ಮರಬಸಣ್ಣನವರ, ನಗರ ಘಟಕದ ಅಧ್ಯಕ್ಷ ಬಿ.ಎಂ,ಕಡೇಕೊಪ್ಪ, ಜ್ಯೋತಿ ಕುದರಿಹಾಳ, ಜಯದೇವ ಶಂಕರಗೌಡ ಪಾಟಿಲ ಇದ್ದರು.

## ಸಮಾಚಾರ ಸಣ್ಣದಲ್ಲ

### ಮಾನ್ಯತೆ ನವೀಕರಣಕ್ಕಾಗಿ ಆನ್‌ಲೈನ್ ಅರ್ಜಿ

**ಧಾರವಾಡ:** ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ (ಪದವಿಪೂರ್ವ) ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪದವಿಪೂರ್ವ ಕಾಲೇಜುಗಳ 2017-18ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಮಾನ್ಯತೆಯನ್ನು ನವೀಕರಿಸಲು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಧಾರವಾಡ ಜಿಲ್ಲೆಯ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪದವಿಪೂರ್ವ ಕಾಲೇಜುಗಳ ಆಡಳಿತ ಮಂಡಳಿ, ಪ್ರಾಚಾರ್ಯರು ಅರ್ಜಿಯನ್ನು ಆಗಸ್ಟ್ 31 ರೊಳಗೆ ಇಲಾಖಾ ಜಾಲತಾಣ www.pue.karnataka.gov.in ಆನ್‌ಲೈನ್ ಮೂಲಕ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಗಾಗಿ ದೂರವಾಣಿ ಸಂಖ್ಯೆ: 0836-2740277 ಸಂಪರ್ಕಿಸಬಹುದೆಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರ

ವಿ+
ಸೋಮವಾರ

# ವಿವಿವಿ ಪೀಠಕ್ಕೆ ಸ್ವರ್ಣಪಾದುಕೆ ಹಣ ಅರ್ಪಣೆ

## ಅಂಬಾಗಿರಿ, ಹರೀಶಿ, ಮಂಗಳೂರು, ಹಾಸಿರ್‌ಕಟ್ಟಾ ವಲಯಗಳ ಶಿಷ್ಯ ಭಕ್ತರಿಂದ ಭಿಕ್ಷಾಸೇವೆ

**ಗೋಕರ್ಣ:** ವಿಷ್ಣುಗುಪ್ತ ವಿಶ್ವವಿದ್ಯಾಪೀಠ ಕಟ್ಟುವುದು ಎಷ್ಟು ಕಷ್ಟವೋ ಅದರ ನಿರ್ವಹಣೆ ಅಷ್ಟೇ ಕಷ್ಟ. ಈ ವಾಸ್ತವ ಅರಿತು ಸ್ವರ್ಣ ಪಾದುಕೆಗಳನ್ನು ಚಾತುರ್ಮಾಸ್ಯದಲ್ಲಿ ಲೋಕಾರ್ಪಣೆ ಮಾಡಲಾಗಿದೆ. ಸ್ವರ್ಣಪಾದುಕೆಗೆ ಅರ್ಪಣೆಯಾಗುವ ಪ್ರತಿಯೊಂದು ರೂಪಾಯಿ ಕೂಡಾ ವಿವಿವಿ ನಿರ್ವಹಣೆಗೆ ಬಳಕೆಯಾಗಲಿದೆ ಎಂದು ಜಗದ್ಗುರು ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾ ಸ್ವಾಮೀಜಿ ನುಡಿದರು.

ಅಶೋಕೆಯ ವಿವಿವಿ ಆವರಣದಲ್ಲಿ ಸಂಘಟನಾ ಚಾತುರ್ಮಾಸ್ಯ ಕೈಗೊಂಡಿರುವ ಶ್ರೀಗಳು ಸೋಮವಾರ ಸಿದ್ದಾಪುರ ಮಂಡಲಾಂತರ್ಗತ ಅಂಬಾಗಿರಿ, ಹಾಸಿರ್ ಕಟ್ಟಾ ಮತ್ತು ಹರೀಶಿ-ಮಂಗಳೂರು ವಲಯಗಳ ಶಿಷ್ಯ ಭಕ್ತರಿಂದ ಭಿಕ್ಷಾ ಸೇವೆ ಸ್ವೀಕರಿಸಿ ಆಶೀರ್ವಚನ ನೀಡಿದರು. ಮುಂದಿನ ದಿನಗಳಲ್ಲಿ ಸ್ವರ್ಣಪಾದುಕೆ ಯಾತ್ರೆ ಕೈಗೊಳ್ಳಲಿದೆ. ಇದು ಶಿಷ್ಯಭಕ್ತರಿಗೆ ಸೇವೆ, ಸಾರ್ಥಕ ಭಾವನೆ ಮೂಡಿಸಲು ಸಹಕಾರಿ. ಸ್ವರ್ಣ ಪಾದುಕೆಯ ಜತೆಗೆ ವಿವಿವಿ ಪರಿಕಲ್ಪನೆಯನ್ನು ಮನೆ ಮನೆಗೆ ಒಯ್ಯಲು ಸಮಿತಿ ರಚಿಸಲಾಗಿದ್ದು, ಈಗಾಗಲೇ ಇದು ಕಾರ್ಯೋನ್ಮುಖವಾಗಿದೆ ಎಂದು ವಿವರಿಸಿದರು. ಸ್ವರ್ಣಪಾದುಕೆ ಎಲ್ಲ ವಲಯಗಳಲ್ಲಿ ಸಂಚರಿಸಲಿದೆ. ಶಿಷ್ಯರು ಸ್ವರ್ಣಪಾದುಕೆ ವಸತಿಗೆ ವ್ಯವಸ್ಥೆ ಕಲ್ಪಿಸಿ, ಎಲ್ಲರಿಗೂ ಅದರ ಸೇವೆಯ ಭಾಗ್ಯ ಒದಗಿ ಬರುವಂತೆ ವ್ಯವಸ್ಥೆ ಮಾಡಬೇಕು. ಅದು ಆಗಮಿಸಿದಾಗ ಪಲ್ಲಕ್ಕಿ ಮೆರವಣಿಗೆಯಲ್ಲಿ ಒಯ್ದು ಶಿಷ್ಯಭಕ್ತರು ಸೇವೆ ಮಾಡಲು ಅನುವು ಮಾಡಿಕೊಡಬೇಕು. ಸ್ವರ್ಣಪಾದುಕೆಯ ಜತೆಗೆ ಆಗಮಿಸುವ ವಿವಿವಿ ಸಮಿತಿ ಪದಾಧಿಕಾರಿಗಳು ವಿವಿವಿಯ ಸಮಗ್ರ ಮಾಹಿತಿಯನ್ನು ಮನೆಗಳಿಗೆ ನೀಡಬೇಕು ಎಂದು ಸಲಹೆ ನೀಡಿದರು.

ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳವರ
ಸಂಘಟನಾ ಚಾತುರ್ಮಾಸ್ಯ

ಜತೆಗೆ ಹವ್ಯಕ ಮಹಾಮಂಡಲದ ಎಲ್ಲ ವಲಯಗಳಲ್ಲಿ ಮಠಕ್ಕೆ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸುವ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯ ನಿರಂತರವಾಗಿ ನಡೆಯಬೇಕು. ಇದು ಉನ್ನತ ಸಾಧನೆಗೆ ಪ್ರೇರಣೆಯಾಗಬಲ್ಲದು ಎಂದು ಅಭಿಪ್ರಾಯಪಟ್ಟರು.

> ಮಠದ ಯೋಜನೆಗಳನ್ನು ಸಮಾಜಕ್ಕೆ ತಲುಪಿಸಲು ಪ್ರತಿ ಮನೆಗೊಬ್ಬ ಕಾರ್ಯಕರ್ತ ಸಜ್ಜಾಗಬೇಕು. ಮಠದ ಯಾವ ಶಿಷ್ಯಭಕ್ತರು ಕೂಡಾ ಜವಾಬ್ದಾರಿಯಿಂದ ಹೊರತಾಗಿರಬಾರದು. ಶಿಷ್ಯಭಕ್ತರಿಗೆ ತೊಂದರೆಯಾದಾಗ ಅವರು ನೆರವು ಯಾಚಿಸಿ ಬರುವ ಮುನ್ನ ನಮ್ಮ ಕಾರ್ಯಕರ್ತರು ಅವರ ಸೇವೆಗೆ ಮುಂದಾಗಬೇಕು.
>
> -ರಾಘವೇಶ್ವರ ಶ್ರೀಗಳು

ವಿವಿವಿ ಸಮಿತಿ ಮುಖ್ಯಸ್ಥ ಆರ್. ಎಸ್.ಹೆಗಡೆ ಹರಗಿ, ನಾಗರಾಜ ಭಟ್ ಪೆದಮಲೆ, ಅರವಿಂದ ದರ್ಬೆ, ಎಂ. ವಿ. ಹೆಗಡೆ, ಹಿರಿಯ ಲೋಕ ಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ವಿವಿವಿ ಆಡಳಿತಾಧಿಕಾರಿ ಪ್ರಸನ್ನ ಕುಮಾರ್ ಟಿ.ಜಿ, ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು ಉಪಸ್ಥಿತರಿದ್ದರು.

**ನೂತನ ಪದಾಧಿಕಾರಿ:** ಸಿದ್ದಾಪುರ ಹವ್ಯಕ ಮಂಡಲದ ನೂತನ ಪದಾಧಿಕಾರಿಗಳ ಉದ್ಘೋಷ ಸಂಸ್ಥಾನದ ಸನ್ನಿಧಿಯಲ್ಲಿ ನೆರವೇರಿತು. ಅಧ್ಯಕ್ಷರಾಗಿ ಮಹೇಶ್ ಚಟ್ನಳ್ಳಿ, ಉಪಾಧ್ಯಕ್ಷರಾಗಿ ಸತೀಶ್ ಅಲ್ಮನೆ, ಪ್ರಧಾನ ಕಾರ್ಯದರ್ಶಿಯಾಗಿ ಚಂದನ ಶಾಸ್ತ್ರಿ, ಸಂಘಟನಾ ಕಾರ್ಯದರ್ಶಿಯಾಗಿ ಕಲ್ಪನಾ ತಲವಾಟ, ಕೋಶಾಧ್ಯಕ್ಷರಾಗಿ ರಾಮಮೂರ್ತಿ ಗಣಪತಿ ಹೆಗಡೆ ಮತ್ತು ವಿಭಾಗಗಳ ಪ್ರಧಾನರು ಶ್ರೀಗಳಿಂದ ನಿಯುಕ್ತಿ ಪತ್ರ ಮತ್ತು ಅನುಗ್ರಹ ಮಂತ್ರಾಕ್ಷತೆ ಪಡೆದರು.

ಅಂಬಾಗಿರಿ ವಲಯ ಅಧ್ಯಕ್ಷರಾಗಿ ಶಂಕರ ಹೆಗಡೆ ಭದ್ರನ್, ಹಾರ್ಸಿಕಟ್ಟಾ ವಲಯ ಅಧ್ಯಕ್ಷರಾಗಿ ಸೀತಾರಾಮ ಗಣಪತಿ ಸುಳಗಾರ, ಹರೀಶಿ - ಮಂಗಳೂರು ವಲಯದ ಅಧ್ಯಕ್ಷರಾಗಿ ಲೋಕೇಶ ದತ್ತಾತ್ರೇಯ ಹೆಗಡೆ ನಿಯುಕ್ತರಾದರು. ಪ್ರತಿ ವಲಯಗಳಿಂದ ಐದು ಮಂದಿ ಸಾಧಕರನ್ನು ಸನ್ಮಾನಿಸಲಾಯಿತು. ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

# ಜಿಲ್ಲೆಯ ಜನತೆಗೆ ತುಂಗಭದ್ರಾ ನದಿ ವರದಾನ

**ಮುಂಡರಗಿ:** ತುಂಗಭದ್ರಾ ನದಿ ಭರ್ತಿಯಾಗಿದ್ದರಿಂದ ಈ ಭಾಗದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಿದೆ. ಇದರಿಂದ ಈ ಭಾಗದ ಜನರು ಹರ್ಷದಿಂದ ಇರುವುದರ ಜೊತೆಗೆ ಜಿಲ್ಲೆಯ ಜನತೆಗೆ ತುಂಗಭದ್ರಾ ನದಿ ವರದಾನವಾಗಿದೆ ಎಂದು ಕೆಪಿಸಿಸಿ ಮಹಿಳಾ ರಾಜ್ಯ ಪ್ರಧಾನಕಾರ್ಯದರ್ಶಿ ಸುಜಾತಾ ಎನ್ ದೊಡ್ಡಮನಿ ಅಭಿಪ್ರಾಯಪಟ್ಟರು. ತಾಲೂಕಿನ ಹಮ್ಮಿಗಿ ಬ್ಯಾರೇಜಿಗೆ ಭೇಟಿ ನೀಡಿ, ಈ ಭಾಗತ ರೈತ ಮಹಿಳೆಯರ ಐದು ಜನ ಮುತ್ತೈದೆಯರಿಗೇ ಪಕ್ಷದ ಮುಖಂಡರೊಂದಿಗೆ ಉಡಿತುಂಬುವ ಮೂಲಕ ತುಂಗಭದ್ರ ನದಿಗೆ ಬಾಗೀನ ಅರ್ಪಿಸಿ ಅವರು ಮಾತನಾಡಿ, ತುಂಗಭದ್ರಾ ನದಿ ಭರ್ತಿಯಾಗಿದ್ದರಿಂದ ಈ ಭಾಗದಲ್ಲಿ ರೈತರ ಸಾವಿರಾರು ಹೆಕ್ಟರ್ ಪ್ರದೇಶದಲ್ಲಿ ರೈತರ ಜಮೀನುಗಳಿಗೆ ನೀರಾವರಿಗಳಿದ್ದು, ರೈತರು ಗುಳೆ ಹೋಗದೇ ಆರ್ಥಿಕವಾಗಿ ಸಬಲತೆಯನ್ನು ಹೊಂದಲು ತುಂಬಾ ಸಹಕಾರಿಯಾಗಿದೆ. ಪ್ರತಿಯೊಬ್ಬರು ನೀರನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊ ಳ್ಳಬೇಕು ಎಂದರು. ಹಮ್ಮಿಗಿ ಗ್ರಾಮ ಪಂಚಾಯತ್ ನೂತನ ಅಧ್ಯಕ್ಷ ಅಬಾಸಾಹೇಬ ಬಹದ್ದೂರ ದೇಸಾಯಿ ಮಾತನಾಡಿದ ರು. ಗ್ರಾ.ಪಂ. ಉಪಾಧ್ಯಕ್ಷ ಕಸ್ತೂರೆವ್ವ ತಳವಾರ, ಬ್ಲಾಕ್ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ರಾಮ ಚಂದ್ರ ಕಲಾಲ, ಯುವ ಕಾಂಗ್ರೆಸ್ ಮುಖಂಡ ರಾ ಜು ಡಾವಣಗೇರಿ, ಎಂ.ಯು. ಮಕಾಂದರ, ಭುವನೇ ಶ್ವರಿ ಕಲ್ಲಕುಟಕರ, ಯುವ ಕಾಂಗ್ರೆಸ್ ತಾಲ್ಲೂಕ ಉಪ ಧ್ಯಕ್ಷ ವಿನೋದ್ ವಡ್ಡರ, ಗ್ರಾಮ ಪಂಚಾಯತ್ ಸದಸ್ಯ ನಾಗರಾಜ ಮದ್ದಿನ, ರವೀಂದ್ರ ಬಂಡಿವಡ್ಡರ ಸೇರಿದಂತೆ ಇತರರು ಇದ್ದರು.

# ಸರಕಾರದ ರೈತ ವಿರೋಧಿ ನೀತಿಗೆ ಆಕ್ರೋಶ

**ಹಾವೇರಿ:** ಬಿಜೆಪಿ ಸರಕಾರದ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಸರಕಾರ ಕೈ ಬಿಟ್ಟಿರುವುದನ್ನು ಖಂಡಿಸಿ ಬಿಜೆಪಿ ಜಿಲ್ಲಾ ರೈತ ಮೋರ್ಚಾದಿಂದ ಪ್ರತಿಭಟನೆ ನಡೆಸಿದರು. ಸೋಮವಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಶಾಸಕರಾದ ಶಿವರಾಜ ಸಜ್ಜನರ ಮಾತನಾಡಿ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ ಸರಕಾರ ಹಿಂದಿನ ಬಿಜೆಪಿ ಸರಕಾರ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಬಿಡುಗಡೆ ಮಾಡಿದ್ದ ಅನುದಾನವನ್ನು ಕಾಂಗ್ರೆಸ ಸರಕಾರ ಹಿಂಪಡೆದಿದೆ, ಸರಕಾರ ವಗಾವಣೆ ದಂದೇ ಮತ್ತು ಕಮಿಷನ ವಸೂಲಿಯಲ್ಲಿ ಮಗ್ನವಾಗಿದ್ದು ಕೇಂದ್ರದ ಕಾಂಗ್ರೆಸ ಮುಖಂಡರಿಗೆ ಕಮಿಷನ ಕೊಡುವ ಎ.ಟಿ.ಎಮ್ ಸರಕಾರವಾಗಿದೆ ಎಂದು ವಾಗ್ದಾಳಿ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದರಾಜ ಕಲಕೋಟಿ ಮಾತನಾಡಿ, ರಾಜ್ಯದ ಕಿಸಾನ ಸಮ್ಮಾನ ಯೋಜನೆ ಮತ್ತು ರೈತ ವಿದ್ಯಾನಿಧಿ ಯೋಜನೆ, ಭೂಸಿರಿ ಯೋಜನೆ, ಬೆಂಬಲ ಬೆಲೆ ಮುಂತಾದ ಬಿಜೆಪಿ ಸರಕಾರ ಜಾರಿಗೆ ತಂದಿದ್ದ ಹತ್ತು ಹಲವು ಯೋಜನೆಗಳನ್ನು ರದ್ದು ಪಡಿಸುವ ಮೂಲಕ ಕಾಂಗ್ರೆಸ ಸರಕಾರವು ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದು ಈ ಕೂಡಲೆ ಆ ಎಲ್ಲ ರೈತಪರ ಯೋಜನೆಗಳನ್ನು ಮರು ಜಾರಿಗೆ ತರಬೇಕೆಂದು ಆಗ್ರಹಿಸಿದರು. ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮುಖಂಡರಾದ ಪಾಲಾಕ್ಷಗೌಡ ಪಾಟೀಲ, ಗವಿಸಿದ್ದಪ್ಪ ದ್ಯಾಮಣ್ಣವರ, ನೀಲಪ್ಪ ಈಟೇರ, ಕೆ ಶಿವಲಿಂಗಪ್ಪ, ಗಂಗಮ್ಮ ಹಾವನೂರು, ಶಿವಾನಂಧ ಮ್ಯಾಗೇರಿ, ಭೋಜರಾಜ ಕರೂದಿ, ಕೃಷ್ಣಾ ಈಳಗೇರ ಹಾಗೂ ಪದಾಧಿಕಾರಿಗಳು, ಕಾರ್ಯಕರ್ತರು ಭಾಗ ವಹಿಸಿದ್ದರು.

> ರಾಜ್ಯದ ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಅತೀಹೆಚ್ಚು ಆತ್ಮಹತ್ಯೆ ಪ್ರಕರಣಗಳು ಹಾವೇರಿ ಜಿಲ್ಲೆಯಲ್ಲಿ ಆಗಿದ್ದು ಸರಕಾರದ ರೈತ ವಿರೋಧಿ ನೀತಿಯೇ ಇದಕ್ಕೆ ಕಾರಣ. ಈಲ್ಲೆಯಲ್ಲಿ ಹಸಿರು ಬರಗಾಲ ಇದ್ದು ಈ ವರೆಗೆ ಹಾನಿಗೆ ಸಮೀಕ್ಷೆ ಆಗಿಲ್ಲ, ಈಗಲಾದರೂ ಸರಕಾರ ಎಚ್ಚೆತ್ತು ರೈತರಿಗೆ ಪರಿಹಾರವನ್ನು ಈ ಕೂಡಲೇ ವಿತರಿಸುವಂತೆ ಆಗ್ರಹಿಸಿದರು.
>
> -ಕುಮಾರ ಶೆಟ್ಟರ ಬಿಜೆಪಿ ರೈತಮೋರ್ಚಾ ಜಿಲ್ಲಾಧ್ಯಕ್ಷ ಕಲ್ಯಾಣ

# ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ

**ಗದಗ:** ವಾಣಿಜ್ಯ ತೆರಿಗೆ ಇಲಾಖೆ ಕಾಯರ್ದರ್ಶಿ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಸಿ.ಶಿಖಾ ಅವರು ಜಿಲ್ಲೆಯ ವಿವಿಧ ಸರಕಾರಿ ಕಟ್ಟಡಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹುಲಕೋಟಿ ಗ್ರಾಮದ ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಕಟ್ಟಡ ವಿನ್ಯಾಸದ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುವ ಕಾಲೇಜಿನ ಕಾರ್ಯ ವೈಖರಿ ಕುರಿತು ಪ್ರಾಂಶುಪಾಲರಾದ ಡಾ.ಶಿವಪ್ಪ ಕುರಿ ಅವರಿಂದ ಮಾಹಿತಿ ಪಡೆದರು. ಸರಕಾರಿ ಪದವಿ ಕಾಲೇಜು ಸಹ ಈ ಮಟ್ಟಿಗೆ ಸುಸಜ್ಜಿತವಾಗಿರುವದು. ಹುಲಕೋಟಿಯ ಮುಕ್ತಿವನಕ್ಕೆ ಭೇಟಿ ನೀಡಿದ ಅವರು ಅಲ್ಲಿನ ಸ್ವಚ್ಛ, ಸುಂದರ ಪರಿಸರವನ್ನು ಹಾಗೂ ಉತ್ತಮ ನಿರ್ವಹಣೆ ಮಾಡುತ್ತಿರುವ ಕುರಿತು ಪಿಂಕ್ ಹುಲಕೋಟಿಯ ಕೆ.ಎಚ್.ಪಾಟೀಲ ಸರಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ನಿರ್ಮಾಣಗೊಂಡಿರುವ ಪಿಂಕ್ ಶೌಚಾಲಯ ಪರಿಕಲ್ಪನೆಯು ಉತ್ತಮ ಯೋಜನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರಕ್ಕೆ ಅಂಗನವಾಡಿ ಶಿಕ್ಷಕಿಯರಿಗೆ ಮೊದಲ ಹಂತದ ತರಬೇತಿ ಆಗಿರುವ ಕುರಿತು ಖಚಿತ ಪಡಿಸಿಕೊಂಡು ಎನ್. ಇ ಪಿ ಅಳವಡಿಕೆ ಕುರಿತು ಹಾಗೂ ಮಕ್ಕಳು ಕ್ರಿಯಾಶೀಲವಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಕುರಿತು ಸ್ವತಹ ತಾವೇ ಮಕ್ಕಳೊಂದಿಗೆ ಸಂವಹನ ನಡೆಸಿದರು. ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ವಸತಿ ನಿಲಯದಲ್ಲಿ ವಿಧ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಲಭ್ಯವಾಗಬೇಕು.

ಸರಕಾರಿ ಯೋಜನೆಗಳ ಹಾಗೂ ಸೌಲಭ್ಯಗಳು ಅರ್ಹರಿಗೆ ತಲುಪಿಸುವ ಮೂಲಕ ಆರ್ಥಿಕ ಬಲ ವರ್ಧನೆಗೆ ಮುಂದಾಗುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಹುಲಕೋಟಿ ಗ್ರಾಮ ಪಂಚಾಯತ ಅಧ್ಯಕ್ಷೆ ನಾಗರತ್ನ ಬೆಳ್ಳೊಳ್ಳಿಮಠ, ಸದಸ್ಯರಾದ ಸಿ. ಬಿ. ಕಳಕಟ್ಟಿ, ಮೋಹನ ದುರಗಣ್ಣವರ, ಏಕನಾಥ ಕರಿರಾಯನಗೌಡರ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಉಪವಿಭಾಗಾಧಿಕಾರಿ ವೆಂಕಟೇಶ ನಾಯ್ಕ, ಸಿ.ಆರ್.ಮುಂಡರಗಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

# ಶೈಕ್ಷಣಿಕ ಜಾಗೃತಿ ಪ್ರಚಾರ ಆಂದೋಲನಕ್ಕೆ ಚಾಲನೆ

**ಹಾವೇರಿ:** ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಶೈಕ್ಷಣಿಕ ಜಾಗೃತಿ ಪ್ರ ಚಾರ ಆಂದೋಲನ ವಾಹನಕ್ಕೆ ಹುಕ್ಕೇರಿ ಮಠದ ಸದಾಶಿವ ಸ್ವಾಮಿಗಳು ಚಾಲನೆ ನೀಡಿದರು. ನಗರದ ಹುಕ್ಕೇರಿಮಠದಲ್ಲಿ ಆವರಣದಲ್ಲಿ ಅವರು ವಾಹನಕ್ಕೆ ಚಾಲನೆ ನೀಡಿದರು. ಈ ಸಮಯದಲ್ಲಿ ಮಾತ ನಾಡಿದ ಸದಾಶಿವ ಶ್ರೀಗಳು, ಉನ್ನತ ಶಿಕ್ಷಣ ಮನೆ ಬಾಗಿಲಿಗೆ ನೀಡಲು ಕರಾ ಮುವಿಯ ಕುಲಪತಿ ಪ್ರೊ. ಶರಣಪ್ಪ ವಿ ಹಲಸ ಮತ್ತು ಕುಲಸಚಿವ ಪ್ರೋ. ಕೆ ಎಲ್ ಎನ್ ಮೂರ್ತಿ ಮಾರ್ಗದರ್ಶನದಲ್ಲಿ ರಾಜ್ಯಾದ್ಯಂತ ಉನ್ನತ ಶಿಕ್ಷಣದ ಅವಕಾ ಶಗಳ ಬಗ್ಗೆ ಜಾಗೃತಿ ಪ್ರಚಾರ ಆಂದೋಲನ ಆರಂಭಿಸಿದ್ದಾರೆ. ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯವು ವಿವಿಧ ಕಾರಣಗಳಿಂದ ಉನ್ನತ ಶಿಕ್ಷಣದಿಂದ ವಂಚಿತರಾದ ಸಮಾಜದ ವಿವಿಧ ವರ್ಗದ ಜನರಿಗೆ ವಿದ್ಯಾಭ್ಯಾಸ ಮುಂದುವರಿಸಲು ಉದ್ಯೋಗಸ್ಥ ಜನರಿಗೆ ಅಂಗವಿಕಲರಿಗೆ ಮಹಿಳೆಯರಿಗೆ ಜ್ಞಾನಾರ್ಜನೆ ಬಯಸುವ ಜನರಿಗೆ ಮನೆ ಬಾಗಿ ಲಿಗೆ ಕಡಿಮೆ ಶೈಕ್ಷಣಿಕ ವೆಚ್ಚದಲ್ಲಿ ಉತ್ತಮ ಶಿಕ್ಷಣ ನೀಡಲು ಶ್ರಮಿಸುತ್ತಿದ್ದು ಈ ಸುವರ್ಣ ಅವಕಾಶವನ್ನು ಹಾವೇರಿ ಜಿಲ್ಲಾ ವ್ಯಾಪ್ತಿಯ ಉದ್ಯೋಗಕಾಂಕ್ಷಿಗಳು ಮತ್ತು ವಿದ್ಯಾಸಕ್ತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

# ಬದುಕಲು ಆರೋಗ್ಯ ಮುಖ್ಯ

**ಶಿರಸಿ:** ಮಕ್ಕಳಲ್ಲಿ ಕಂಡು ಬರುವ ರುಬೆಲ್ಲಾ ಮತ್ತು ದಡಾರ ನಿರ್ಮೂಲನೆಗಾಗಿ ಸರಕಾರದಿಂದ ಉಚಿತವಾಗಿ ನೀಡಲಾಗುವ ಪರಿಣಾಮಕಾರಿ ಮಿಷನ್ ಇಂದ್ರಧನುಷ್ 5.0 ಅಭಿಯಾನಕ್ಕೆ ಶಾಸಕ ಭೀಮಣ್ಣ ಟಿ ನಾಯ್ಕ ಅಂಬೇಡ್ಕರ್ ಭವನದಲ್ಲಿ 5 ವರ್ಷದ ಮಕ್ಕಳಿಗೆ ಲಸಿಕೆ ಹಾಕುವುದರ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ನಾವು ಆರೋಗ್ಯವನ್ನು ಮಧ್ಯ ವಯಸ್ಸಿನಲ್ಲಿ ಇಲ್ಲವೇ ಮುದಿ ವಯಸ್ಸಿನಲ್ಲಿ ಕಾಪಾಡಿಕೊಳ್ಳುವುದಕ್ಕಿಂತ ಬಾಲ್ಯದಿಂದಲೇ ಯೋಗ ವ್ಯಾಯಾಮದಿಂದಲೇ ಕಾಪಿಟ್ಟುಕೊಂಡು ಬರಬೇಕು. ನಾವು ಯಾವುದೇ ಸಂಪತ್ತು ಗಳಿಸಬೇಕಾದರೆ ಮುಖ್ಯವಾಗಿ ನಮಗೆ ಆರೋಗ್ಯ ಅವಶ್ಯಕವಾಗಿದೆ ಎಂದರು. ಚಿಕ್ಕ ಮಕ್ಕಳಲ್ಲಿ ಕಂಡು ಬರುವ ದಡಾರ್,ರುಬೆಲ್ಲಾ ಬೇರು ಸಮೇತವಾಗಿ ಕಿತ್ತು ಹಾಕಲು ಸರಕಾರ ಇಂದ್ರಧನುಷ್ 5.0 ಅಭಿಯಾನ ಜಾರಿಗೆ ತಂದಿದ್ದು ಇದರ ಪ್ರಯೋಜನವನ್ನು ಪಾಲಕರು ತಮ್ಮ ಮಕ್ಕಳಿಗೆ ಸಿಗುವಂತೆ ಮಾಡಿ ಒಳ್ಳೆ ಆರೋಗ್ಯವಂತ ಮಕ್ಕಳನ್ನಾಗಿ ಬೆಳಸಬೇಕೆಂದು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕಾ ಆರೋಗ್ಯಾಧಿಕಾರಿ ಡಾ.ವಿನಾಯಕ ಭಟ್ಟ ಮಾತನಾಡಿ, ಈ ಲಸಿಕೆಯಿಂದ ಬಿಟ್ಟು ಹೋಗಿರುವ 5 ವರ್ಷದೊಳಗಿನ 105 ಮಕ್ಕಳಿಗೆ ಹಾಗು 35 ಗರ್ಭಿಣಿ ಸ್ತ್ರೀಯರಿಗಾಗಿ ಇಂದ್ರಧನುಷ್ 5.0 ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. .ವೇದಿಕೆಯಲ್ಲಿ ಜಿಲ್ಲಾ ನೊಡಲ್ ಅದಿಕಾರಿ ಶಂಕರ ರಾವ್, ನಗರಸಭೆ ಸದಸ್ಯ ಪ್ರದೀಪ ಶೆಟ್ಟಿ,ಡಾ,ಭಾರತಿ ಹೊಸ್ಮನಿ ಇನ್ನಿತರರಿದ್ದರು.

---

## ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್

kotak
ನೋಂದಾಯಿತ ಕಛೇರಿ: 27 ಬಿಕೆಸಿ, ಸಿ 27, ಜಿ ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂ), ಮುಂಬೈ-400051
ಶಾಖೆ: ನಂ.60, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು-560004, ಕರ್ನಾಟಕ

### ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

**ಕೋಟಕ್ ಮಹೀಂದ್ರ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು ಸೆಕ್ಯುರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಡಿ ಇ-ಹರಾಜು ಮಾರಾಟ ಸೂಚನೆ.**

1. ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಕೋಟಕ್ ಬ್ಯಾಂಕ್ ಲಿ. ("ಪೂರಕ ಭದ್ರತಾದಾರರು") ಗೆ ಅಡಮಾನ/ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿಯವರು 16.02.2023ರಂದು ಸ್ವಾಧೀನ ಪಡಿಸಿಕೊಂಡಿದ್ದು, ಅದನ್ನು "ಎಲ್ಲಿ ಹೇಗಿದೆಯೋ ಹಾಗಿನ ಆಧಾರ"ದ ಮೇಲೆ, ಯಾವುದೇ ಅವಲಂಬನೆ ಇಲ್ಲದೆ, ಬ್ಯಾಂಕಿಗೆ ಮೆ॥ ಪ್ರಿಯಾಂಕ ಎಂಟರ್‌ಪ್ರೈಸಸ್ ಜಿಎಂ ಮತ್ತು ಇತರರಿಂದ 31.07.2023ರವರೆಗೆ ಬರಬೇಕಾಗಿರುವ ಬಾಕಿ ಹಣ ರೂ.1,23,52,065.29 (ಒಂದು ಕೋಟಿ ಇಪ್ಪತ್ಮೂರು ಲಕ್ಷ ಐವತ್ತೆರಡು ಸಾವಿರದ ಅರುವತ್ತೈದು ರೂಪಾಯಿಗಳು ಮತ್ತು ಪೈಸೆ ಇಪ್ಪತ್ತೊಂಭತ್ತು ಮಾತ್ರ) ಹಾಗೂ 01.08.2023ರಿಂದ ಮುಂದುವರಿದ ಬಡ್ಡಿ, ವೆಚ್ಚ, ದರಗಳು ಮತ್ತು ಖರ್ಚುಗಳನ್ನು ಪೂರಕ ಭದ್ರತಾದಾರರು ವಸೂಲು ಮಾಡಿಕೊಳ್ಳಲು ಈ ಕೆಳಗೆ ವಿವರಿಸಿರುವ ಆಸ್ತಿಯನ್ನು 14.09.2023ರಂದು ಇ-ಹರಾಜು ಮೂಲಕ ಮಾರಾಟ ಮಾಡಲಿರುವರು. ಆಸ್ತಿಯ ವಿವರ, ಮೀಸಲು ಬೆಲೆ (ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ) ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಲಾಟ್ ಸಂ. | ಮಾರಾಟಕ್ಕಿರುವ ಆಸ್ತಿಯ ವಿವರ | ಮೀಸಲು ಬೆಲೆ | ಇಎಂಡಿ |
|---|---|---|---|
| 1. | 1. ಆಸ್ತಿಯು ಶ್ರೀಮತಿ ಶರಣಮ್ಮನವರ ಮಾಲೀಕತ್ವದಲ್ಲಿದೆ<br>ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಮನೆ ಆಸ್ತಿಯು ನೆಲ ಮತ್ತು ಮೊದಲನೆ ಮಹಡಿಯನ್ನು ಹೊಂದಿದ್ದು, ಇದನ್ನು ಪ್ಲಾಟ್ ಎನ್‌ಎ ಮತ್ತು ಸರ್ವೆ ನಂ. 974 ರಲ್ಲಿ ನಿರ್ಮಿಸಲಾಗಿದ್ದು, ಸಿಂಧನೂರು, ಸಿಎಂಸಿ ಖಾತ ನಂ. 5-3-772 ಆಸ್ತಿ ನಂ. 25-12-51 ಇಲ್ಲಿದ್ದು, ವಿಸ್ತೀರ್ಣ ಪೂ-ಪ: 12.192024 ಮೀಟರ್ ಮತ್ತು ಉ-ದ : 4-114808 ಮೀಟರ್ ವಾರ್ಡ್ ನಂ. 10, ನಟರಾಜ ಕಾಲೊನಿ, ಸಿಂಧನೂರು ಪಟ್ಟಣ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ. 25-505-109: ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ. 25-12-49.<br>2. ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಮನೆ ಆಸ್ತಿಯು ನೆಲ ಮತ್ತು ಮೊದಲನೆ ಮಹಡಿಯನ್ನು ಹೊಂದಿದ್ದು, ಇದನ್ನು ಪ್ಲಾಟ್ ಎನ್‌ಎ ಮತ್ತು ಸರ್ವೆ ನಂ. 974 ರಲ್ಲಿ ನಿರ್ಮಿಸಲಾಗಿದ್ದು, ಸಿಂಧನೂರು, ಸಿಎಂಸಿ ಖಾತ ನಂ. 5-3-773 ಆಸ್ತಿ ನಂ. 25-12-49 ಇಲ್ಲಿದ್ದು, ವಿಸ್ತೀರ್ಣ ಪೂ-ಪ: 12.192024 ಮೀಟರ್ ಮತ್ತು ಉ-ದ : 4-114808 ಮೀಟರ್ ವಾರ್ಡ್ ನಂ. 10, ನಟರಾಜ ಕಾಲೊನಿ, ಸಿಂಧನೂರು ಪಟ್ಟಣ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ. 25-505-109: ಉತ್ತರಕ್ಕೆ: ಆಸ್ತಿ ನಂ. 25-12-52, ದಕ್ಷಿಣಕ್ಕೆ: ಆಸ್ತಿ ನಂ. 25-12-47.<br>3. ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಮನೆ ಆಸ್ತಿಯು ನೆಲ ಮತ್ತು ಮೊದಲನೆ ಮಹಡಿಯನ್ನು ಹೊಂದಿದ್ದು, ಇದನ್ನು ಪ್ಲಾಟ್ ಎನ್‌ಎ ಮತ್ತು ಸರ್ವೆ ನಂ. 974 ರಲ್ಲಿ ನಿರ್ಮಿಸಲಾಗಿದ್ದು, ಸಿಂಧನೂರು, ಸಿಎಂಸಿ ಖಾತ ನಂ. 5-3-774 ಆಸ್ತಿ ನಂ. 25-12-47 ಇಲ್ಲಿದ್ದು, ವಿಸ್ತೀರ್ಣ ಪೂ-ಪ: 12.192024 ಮೀಟರ್ ಮತ್ತು ಉ-ದ : 3.962408ಮೀಟರ್ ವಾರ್ಡ್ ನಂ. 10, ನಟರಾಜ ಕಾಲೊನಿ, ಸಿಂಧನೂರು ಪಟ್ಟಣ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ. 25-505-109: ಉತ್ತರಕ್ಕೆ: ಆಸ್ತಿ ನಂ. 25-12-49, ದಕ್ಷಿಣಕ್ಕೆ: ಆಸ್ತಿ ನಂ. 25-12-45.<br>4. ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಮನೆ ಆಸ್ತಿಯು ನೆಲ ಮತ್ತು ಮೊದಲನೆ ಮಹಡಿಯನ್ನು ಹೊಂದಿದ್ದು, ಇದನ್ನು ಪ್ಲಾಟ್ ಎನ್‌ಎ ಮತ್ತು ಸರ್ವೆ ನಂ. 974 ರಲ್ಲಿ ನಿರ್ಮಿಸಲಾಗಿದ್ದು, ಸಿಂಧನೂರು, ಸಿಎಂಸಿ ಖಾತ ನಂ. 5-3-775 ಆಸ್ತಿ ನಂ. 25-505-109ಇಲ್ಲಿದ್ದು, ವಿಸ್ತೀರ್ಣ ಪೂ-ಪ: 6.096012ಮೀಟರ್ ಮತ್ತು ಉ-ದ : 12.192024ಮೀಟರ್ ವಾರ್ಡ್ ನಂ. 10, ನಟರಾಜ ಕಾಲೊನಿ, ಸಿಂಧನೂರು ಪಟ್ಟಣ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.25-12-51 ಮತ್ತು 49 ಮತ್ತು 47, ಪಶ್ಚಿಮಕ್ಕೆ: ಆಸ್ತಿ ನಂ. 25-505-111 ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ. 25-507-84 ಮತ್ತು 82.<br>ಒಟ್ಟಾಗಿ ಈಗಿರುವ ಕಟ್ಟಡ ಮತ್ತು ರಚನೆಗಳು ಮತ್ತು ಯಾವುದೇ ಸಮಯದಲ್ಲಿ/ ಅಡಮಾನ ಮಾಡಿದ ನಂತರ ಸೇರಿಕೊಂಡಿರುವಂತಹ ಅದರಲ್ಲಿರುವ ಎಲ್ಲಾ ಸೇರಿಕೆಗಳು ಮತ್ತು ಕಟ್ಟಡಗಳು ಮತ್ತು ರಚನೆಗಳು ರಚಿತವಾಗಬೇಕಿದ್ದು, /ನಿರ್ಮಾಣವಾಗಬೇಕಿರುವಂತಹುದು ಮತ್ತು ಪ್ರಸ್ತುತ ಹಾಗೂ ಭವಿಷ್ಯದಲ್ಲಿ ಭೂಮಿಯ ಮೇಲ್ಭೆ ಹಾಗೂ ಒಳಭಾಗದಲ್ಲಿರುವ ಎಲ್ಲಾ ಅಳವಡಿಕೆಗಳು, ಪೀಠೋಪಕರಣಗಳು ಮತ್ತು ಘಟಕ ಮತ್ತು ಯಂತ್ರೋಪಕರಣಗಳು ಸೇರಿವೆ. | ರೂ.<br>96,10,000/-<br>(ತೊಂಭತ್ತಾರು ಲಕ್ಷ ಹತ್ತು ಸಾವಿರ ರೂಪಾಯಿಗಳು ಮಾತ್ರ) | ರೂ.<br>9,61,000/-<br>(ಒಂಭತ್ತು ಲಕ್ಷ ಅರುವತ್ತೊಂದು ಸಾವಿರ ರೂಪಾಯಿಗಳು ಮಾತ್ರ) |

**ಇ-ಹರಾಜು ಮೂಲಕ ಮಾರಾಟವಾಗಲಿರುವ ಆಸ್ತಿಗಳ ನಿಯಮ ಮತ್ತು ನಿಬಂಧನೆಗಳು:**

1. ಆಸ್ತಿಗಳ ಪರಿವೀಕ್ಷಣೆ: ಆಸಕ್ತರು 11.08.2023 ರಿಂದ 13.09.2023ರವರೆಗೆ ಬೆಳಿಗ್ಗೆ 11.00ರಿಂದ ಮಧ್ಯಾಹ್ನ 3.00ರ ವರೆಗೆ ಪರಿವೀಕ್ಷಿಸಬಹುದಾಗಿದೆ. ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ: 13.09.2022ರಂದು ಸಂಜೆ 5.00ಗಂಟೆ.
2. ಹರಾಜು ಮಾರಾಟವನ್ನು ಆನ್‌ಲೈನ್ ಇ-ಹರಾಜು /ಬಿಡ್ಡಿಂಗ್ ಮೂಲಕ ಕೆಎಂಬಿಎಲ್‌ನ ಅಂಗೀಕೃತ ಸೇವಾ ಪೂರೈಕೆದಾರರಾದ ಮೆ॥ ಆಕ್ಷನ್ ಟೈಗರ್, ಕಚೇರಿ: ಅಹಮದಾಬಾದ್, ಗುಜರಾತ್-380006, ಸಹಾಯವಾಣಿ ಸಂ. : ಶ್ರೀ ಪ್ರವೀಣ್ ಕುಮಾರ್ : 7961200515/9722778828, ಮತ್ತು ಇ-ಮೇಲ್ : sales@AuctionTiger.net, ವೆಬ್‌ಪೋರ್ಟಲ್ www.AuctionTiger.net ಮೂಲಕ ನಡೆಯಲಿದೆ.
3. ಹರಾಜು ಮಾರಾಟವು 14ನೇ ಸೆಪ್ಟಂಬರ್ 2023ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯ ಒಳಗಾಗಿ, ಒಂದು ವೇಳೆ ಹರಾಜು ಮುಗಿಯುವ ಕೊನೆಯ 5 ನಿಮಿಷಗಳ ಅವಧಿಯಲ್ಲಿ ಬಿಡ್ ಅಂತಿಮಗೊಂಡರೆ 5 (ಐದು) ನಿಮಿಷಗಳ ಸ್ವಯಂ ವಿಸ್ತರಣೆ ಮೂಲಕ ನಡೆಯಲಿದೆ.
4. ಮೀಸಲು ಬೆಲೆಗಿಂತ ಮೇಲ್ಪಟ್ಟು ಮೊತ್ತವನ್ನು ಬಿಡ್ ಅಧಿಕೃತ ಅಧಿಕಾರಿ (ಎ.) ಯವರು ನಿಗದಿಪಡಿಸಿದ್ದು, ನಂತರದ ಬಿಡ್ ರೂ.2,00,000/- (ಎರಡು ಲಕ್ಷ ರೂಪಾಯಿಗಳು ಮಾತ್ರ) ದ ದ್ವಿಗುಣಗೊಳ್ಳುವಿಕೆ ಮೂಲಕ ನಂತರದ ಬಿಡ್‌ನ್ನು ಬಿಡ್ಡುದಾರರು ಉತ್ತಮಪಡಿಸಿಕೊಳ್ಳಬಹುದು.
5. ಅಧಿಕೃತ ಅಧಿಕಾರಿಯವರು ನಿಗದಿಪಡಿಸಿದ ಮೀಸಲು ಬೆಲೆಗಿಂತ ಕಡಿಮೆ ದರಕ್ಕೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. ಬಿಡ್‌ದರರು ಮೀಸಲು ಬೆಲೆಗಿಂತ ಕಡಿಮೆ ದರವನ್ನು ನಮೂದಿಸಿದ್ದರೆ ಅಂತಹ ಬಿಡ್‌ನ್ನು ತಿರಸ್ಕರಿಸಿ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಹರಾಜು / ಮಾರಾಟ ದೃಢೀಕರಣಗೊಂಡ ನಂತರ ಯಶಸ್ವಿ ಬಿಡ್ಡುದಾರರು / ಖರೀದಿದಾರರು ಶೇ 25 ರಷ್ಟು ಬಿಡ್ ಮೊತ್ತ (10% ಇಎಂಡಿ ಸೇರಿದಂತೆ) ವನ್ನು ಅದೇ ದಿನ ಪಾವತಿಸಬೇಕು ಹಾಗೂ ಉಳಿದ ಶೇ 75 ರಷ್ಟನ್ನು 15 ದಿನಗಳ ಒಳಗಾಗಿ, ಇಲ್ಲವೇ ಅಧಿಕೃತ ಅಧಿಕಾರಿಯವರ ವಿವೇಚನೆಗೆ ಬಿಟ್ಟಿರುವಂತೆ ಲಿಖಿತ ಮೂಲಕ ವಿಸ್ತರಣೆಗೆ ಸಹ ಒಪ್ಪಿಕೊಳ್ಳಬಹುದು. ಒಂದು ವೇಳೆ ನಿಗದಿತ ಸಮಯದಲ್ಲಿ ಹಣ ಪಾವತಿಸಲು ತಪ್ಪಿದಲ್ಲಿ ಬಿಡ್ಡುದಾರರು ಈಗಾಗಲೇ ಪಾವತಿಸಿರುವ 25% ಇಎಂಡಿ ಹಣವನ್ನು ಬ್ಯಾಂಕ್ ಮುಟ್ಟುಗೋಲು ಹಾಕಿಕೊಳ್ಳಲಿದೆ. ಒಂದು ವೇಳೆ ಅತೀ ಹೆಚ್ಚು ಬಿಡ್‌ಮಾಡಿದ ಬಿಡ್‌ದಾರರು ಹಣ ಪಾವತಿಸಲು ವಿಫಲವಾದರೆ, 24 ಗಂಟೆಗಳ ಒಳಗಾಗಿ ಅವರ ಪರವಾದ ಬಿಡ್‌ನ್ನು ರದ್ದುಗೊಳಿಸಿ, ನಂತರದ ಅತೀ ಹೆಚ್ಚು ಬಿಡ್‌ದಾರರಿಗೆ ಆಸ್ತಿ ಖರೀದಿಗೆ ಆಫರ್ ನೀಡಲಾಗುವುದು.
7. ಮೇಲೆ ಹೇಳಲಾದ ವೆಬ್‌ಸೈಟ್ ಲಿಂಕ್‌ಗೆ ಭೇಟಿ ನೀಡಿ, ಬಿಡ್ ನಮೂನೆ, ವಿವರವಾದ ನಿಯಮ ಮತ್ತು ನಿಬಂಧನೆಗಳನ್ನು ತಿಳಿದುಕೊಂಡು ಬಿಡ್‌ದಾರರು ಬಿಡ್ ಸಲ್ಲಿಸಲು ಕೋರಲಾಗಿದೆ.
8. ಆನ್‌ಲೈನ್/ಭೌತಿಕವಾಗಿ ಬಿಡ್ ಸಲ್ಲಿಸುವವರು ನಿಗದಿತ ನಮೂನೆಯಲ್ಲೇ ಸಲ್ಲಿಸಬೇಕು ಇತರೆ ಮಾದರಿ/ ಅಪೂರ್ಣ ಬಿಡ್‌ಗಳನ್ನುತಿರಸ್ಕರಿಸಲಾಗುವುದು.
9. ಎಲ್ಲಾ ಬಿಡ್ ದಾಖಲೆಗಳು ಕೆವೈಸಿ ದಾಖಲೆಗಳೊಂದಿಗೆ ಅಂದರೆ (1) ಪ್ಯಾನ್ ಕಾರ್ಡ್ (2) ಆಧಾರ್ ಕಾರ್ಡ್/ಪಾಸ್‌ಪೋರ್ಟ್ (3) ಪ್ರಸಕ್ತ ವಾಸದ ವಿಳಾಸದ ಪುರಾವೆ (4) ಸೂಕ್ತ ಇ-ಮೇಲ್ ವಿಳಾಸ (5) ಸಂಪರ್ಕ ಸಂಖ್ಯೆ (ಮೊಬೈಲ್ ಸಂ.) ಇತ್ಯಾದಿಗಳ ಸ್ಕ್ಯಾನ್ ಪ್ರತಿಯನ್ನು ಒಳಗೊಂಡ, ಡಿಡಿಯನ್ನು "ಕೋಟಕ್ ಮಹೀಂದ್ ಬ್ಯಾಂಕ್ ಲಿ, ಬೆಂಗಳೂರು" ಇಲ್ಲಿ ಪಾವತಿಯಾಗುವಂತೆ ಪಡೆದು ಸಲ್ಲಿಸಬೇಕು.
10. ಉದ್ದೇಶಿತ ಬಿಡ್ಡುದಾರರು ಇಎಂಡಿ ಪಾವತಿಸಿದ ದಾಖಲೆಯ ನಮೂನೆಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.
11. ಉದ್ದೇಶಿತ ಬಿಡ್‌ದಾರರು ಸೂಕ್ತವಾದ ಇ-ಮೇಲ್ ವಿಳಾಸವನ್ನು ಹೊಂದಿರಬೇಕು, ಏಕೆಂದರೆ, ಮುಂದಿನ ಎಲ್ಲಾ ಸಂವಹನಗಳನ್ನು ಅಧಿಕೃತ ಅಧಿಕಾರಿಯವರು ಇ-ಮೇಲ್ ಮೂಲಕವೇ ನಡೆಸಲಿರುವರು.
12. ಉದ್ದೇಶಿತ ಬಿಡ್‌ದಾರರು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ, ಆನ್‌ಲೈನ್/ಖುದ್ದಾಗಿ ಇ-ಹರಾಜಿನಲ್ಲಿ ಪಾಲ್ಗೊಳ್ಳುವ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳಬಹುದು.
13. ಆದಾಗ್ಯೂ, ಯಾವುದೇರೀತಿಯ ತಾಂತ್ರಿಕ ಲೋಪ/ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಅಧಿಕೃತ ಅಧಿಕಾರಿ ಅಥವಾ ಪೂರಕ ಭದ್ರತಾದಾರರು ಜವಾಬ್ದಾರರಾಗಿರುವುದಿಲ್ಲ.
14. ಯಶಸ್ವಿಯಾಗದ ಇಎಂಡಿ ಹಣವನ್ನು ಇ-ಹರಾಜು ಪ್ರಕ್ರಿಯೆ ಮುಗಿದ 7 ಕೆಲಸದ ದಿನಗಳ ಒಳಗಾಗಿ ಹಿಂತಿರುಗಿಸಲಾಗುವುದು
15. ಮಾರಾಟವು ಬ್ಯಾಂಕ್‌ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಒಂದು ವೇಳೆ ಸಾಲಗಾರರು/ಜಾಮೀನುದಾರರು ಪೂರಕ ಭದ್ರತಾದಾರರಿಗೆ ಸಂಪೂರ್ಣ ಹಣವನ್ನು ಇ-ಹರಾಜಿನ ನಿಗದಿತ ದಿನಾಂಕ ಮತ್ತು ಸಮಯದ ಒಳಗಾಗಿ ಪಾವತಿಸಿದಲ್ಲಿ ಮಾರಾಟವನ್ನು ನಡೆಸಲಾಗುವುದಿಲ್ಲ.
16. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ, ಮೇಲಿನ ಆಸ್ತಿಗಳಿಗೆ ಯಾವುದೇ ಪರಭಾರೆ ಇರುವುದಿಲ್ಲ. ಆದಾಗ್ಯೂ, ಉದ್ದೇಶಿತ ಟೆಂಡರ್‌ದಾರರು ತಮ್ಮ ಸ್ವ-ಇಚ್ಛೆಯಿಂದ ಟೈಟಲ್/ಪರಭಾರೆ ಇತ್ಯಾದಿಗಳ ಬಗ್ಗೆ ಸ್ವತಂತ್ರವಾಗಿ ವಿಚಾರಣೆ ನಡೆಸಬಹುದಾಗಿದೆ. ಮಾರಾಟಕ್ಕಿಟಿರುವ ಈ ಆಸ್ತಿ ಬಗ್ಗೆ ಯಾವುದೇ ದರ, ಪರಭಾರೆ ಅಥವಾ ಸರ್ಕಾರಕ್ಕೆ ಇನ್ನಿತರ ಯಾವುದೇ ಬಾಕಿಗಳಿದ್ದರೆ ಅಧಿಕೃತ ಅಧಿಕಾರಿಗಳು ಅಥವಾ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ. ಅಧಿಕೃತ ಅಧಿಕಾರಿಯವರಿಗೆ ತಿಳಿದೋ ಅಥವಾ ತಿಳಿಯದೆಯೋ ಪ್ರಸಕ್ತ ಇದ್ದರೆ/ ಮುಂದೆ ಬರಬಹುದಾದ ಯಾವುದೇ ಪರಭಾರೆ ಇದ್ದಲ್ಲಿ, ಅದು ಸೇರಿದಂತೆ ಮಾರಾಟ ನಡೆಸಲಾಗುವುದು.
17. ಯಾವುದೇ ಕಾರಣ ನೀಡದೆ ಅಧಿಕೃತ ಅಧಿಕಾರಿಯವರು ಯಾವುದೇ ಅಥವಾ ಎಲ್ಲಾ ಟೆಂಡರ್/ಟೆಂಡರ್‌ಗಳನ್ನು (ಯಾವುದೇ ಆಸ್ತಿಗೆ) ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಇ-ಹರಾಜನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
18. ಖರೀದಿದಾರರ ಪರವಾಗಿ ಅಧಿಕೃತ ಅಧಿಕಾರಿಯವರು "ಮಾರಾಟ ಪ್ರಮಾಣಪತ್ರ" ವನ್ನು ನೀಡುತ್ತಾರೆ. ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ಕನ್‌ವೇನೆನ್ಸ್, ಪೈಅಟ್, ಟಿಡಿಎಸ್, ಜಿಎಸ್‌ಟಿ ಇತ್ಯಾದಿಗಳು ಯಾವುದೇ ಶುಲ್ಕ ಮತ್ತು ವೆಚ್ಚಗಳನ್ನು ಖರೀದಿದಾರರೇ ಭರಿಸಬೇಕು. ಮಾರಾಟವು ಸರ್ಫೇಸಿ ಕಾಯಿದೆ/ನಿಯಮಗಳು 2002ರ ಅನ್ವಯ ಮೇಲೆ ಹೆಸರಿಸಿದ ನಿಯಮ ಮತ್ತು ನಿಬಂಧನೆಗಳಂತೆ ನಡೆಯಲಿದೆ.

| ಟಿಡಿಎಸ್ ಕಡಿತ ಮಾಡಲಾಗುವುದು | ಹರಾಜಿನ ದರದ 1% |
|---|---|

- ಅಡಮಾನದಾರರ ಹೆಸರಿನಲ್ಲಿ ಟಿಡಿಎಸ್ ಕಡಿತ ಮಾಡಲಾಗುವುದು
- ಒಂದು ವೇಳೆ ಅಡಮಾನ ಆಸ್ತಿಯು ಜಂಟಿ ಮಾಲೀಕತ್ವದಲ್ಲಿದ್ದರೆ, ಕ್ರಯಪತ್ರದಲ್ಲಿ ಮಾಲೀಕತ್ವದ ಅನುಪಾತದ ಬಗ್ಗೆ ನಿರ್ದಿಷ್ಟವಾಗಿ ನಮೂದಾಗಿಲ್ಲವಾದರೆ ಟಿಡಿಎಸ್‌ನ್ನು ಮೊದಲ ಮಾಲೀಕರ ಹೆಸರಿನಲ್ಲಿ ಕಡಿತ ಮಾಡಲಾಗುವುದು.
- ಹರಾಜು ಖರೀದಿದಾರರು ಟಿಡಿಎಸ್ ಠೇವಣಿಯ ನಂತರ ನಮೂನೆ 16ಎ ನ್ನು ಟಿಡಿಎಸ್ ಪಾವತಿ ಮತ್ತು ದೃಢೀಕರಣಕ್ಕಾಗಿ ಸಲ್ಲಿಸಬೇಕು.

19. ಮಾರಾಟವು ಸರ್ಫೇಸಿ ಕಾಯಿದೆ/ನಿಯಮಗಳು 2002ರಲ್ಲಿ ನಿಗದಿಪಡಿಸಿದ ನಿಬಂಧನೆಗಳ ಅನುಸಾರ ನಡೆಯಲಿದೆ.
20. ಆಸ್ತಿ ಪರಿವೀಕ್ಷಣೆ ಸೇರಿದಂತೆ ಹರಾಜಿನ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿಗಾಗಿ ಆಸಕ್ತ ಬಿಡ್‌ದಾರರು ಶ್ರೀ ಶ್ರೀಧರ ಎಸ್ ಇವರನ್ನು ದೂ: 9916165915 ಎಲ್ಲಾ ಕೆಲಸದ ದಿನದಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯ ಒಳಗಾಗಿ ಸಂಪರ್ಕಿಸಬಹುದಾಗಿದೆ

ದಿನಾಂಕ: 07.08.2023
ಸ್ಥಳ: ಬೆಂಗಳೂರು

(ಅಧಿಕೃತ ಅಧಿಕಾರಿ)
ಕೋಟಕ್ ಮಹೀಂದ್ರ ಬ್ಯಾಂಕ್

---

सेन्ट्रल बैंक ऑफ़ इंडिया
Central Bank of India

## ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ಪ್ರಾದೇಶಿಕ ಕಚೇರಿ - ಚಬ್ಬಿ ಅಕ್ಷಯ್ ಕಾರ್ನರ್, 2 ನೇ ಮಹಡಿ,
ಅಕ್ಷಯ್ ಸೆಂಟರ್, ಗೋಕುಲ್ ರಸ್ತೆ, ಹುಬ್ಬಳ್ಳಿ- 580030

### ಚಿನ್ನದ ಆಭರಣಗಳ ಹರಾಜು ಮಾರಾಟದ ಸೂಚನೆ

ಸಂಬಂಧಪಟ್ಟ ಎಲ್ಲಾ ಗ್ರಾಹಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ಖಾತೆಗಳಲ್ಲಿ ಬ್ಯಾಂಕಿಗೆ ಅಡಮಾನವಿಟ್ಟಿರುವ ಚಿನ್ನದ ಆಭರಣಗಳ ಹರಾಜು ಮಾರಾಟ ನಡೆಸಲಾಗುತ್ತಿದೆ, ನೋಟೀಸ್ ಕಳುಹಿಸಲಾಗಿದ್ದು, ಕೆಲವು ನೋಟೀಸ್‌ಗಳು ಸ್ವೀಕೃತವಾಗಿದ್ದು ಮತ್ತೆ ಕೆಲವು ಸ್ವೀಕೃತವಾಗದೆ ವಾಪಾಸ್ ಬಂದಿರುತ್ತವೆ ಮತ್ತು ಈ ದಿನಾಂಕದವರೆಗೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದ್ದರಿಂದ ದಿನಾಂಕ: 25.08.2023ರಂದು ಆನ್‌ಲೈನ್ ಹರಾಜು https://egold.auctiontiger.net ಮೂಲಕ ಸಾಲಗಾರರ ವೆಚ್ಚದಲ್ಲಿ ಹರಾಜು ನಡೆಸಲಾಗುತ್ತಿದೆ ಅಥವಾ ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಿಂದ ಹೆಚ್ಚಿನ ಸೂಚನೆಯಿಲ್ಲದೆ ಯಾವುದೇ ಅನುಕೂಲಕರ ದಿನಾಂಕದಂದು ಹರಾಜು ನಡೆಸಲಾಗುತ್ತಿದೆ.

| ಕ್ರ ಸಂ. | ಸಾಲಗಾರರ ಖಾತೆ ನಂ | ಒಟ್ಟು ಗ್ರಾಂ | ಒಟ್ಟು ನಿವ್ವಳ ತೂಕ | ಒಟ್ಟು ಮೊತ್ತ | ಇಎಂಡಿ |
|---|---|---|---|---|---|
| 1 | 5359094008 | 35.3 | 28.3 | 105000 | 10500 |
| 2 | 5369143148 | 29.16 | 26 | 52000 | 5200 |
| 3 | 5374596420 | 80.39 | 70 | 265000 | 26500 |

• ಆನ್‌ಲೈನ್ ಹರಾಜು ದಿನಾಂಕ 07.08.2023 ರಂದು ಮಧ್ಯಾಹ್ನ 12 ರಿಂದ 2 ಗಂಟೆವರೆಗೆ ನಡೆಯಲಿದೆ. • ಉದ್ದೇಶಿತ ಬಿಡ್ಡಾರರು ಮೆ॥ ಇ - ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ (ಹರಾಜು ಟೈಗರ್), ಎಲ್ಲಿಸ್‌ಬ್ರಿಡ್ಜ್, ಅಹಮದಾಬಾದ್, ಸಂಪರ್ಕ ಸಂಖ್ಯೆ 9328913633/6351896640 ಅಥವಾ ಇಮೇಲ್ ಐಡಿ:- egold@auctiontiger.net ಅನ್ನು ಸಂಪರ್ಕಿಸಬೇಕು. • ಯಶಸ್ವಿ ಬಿಡ್‌ದಾರರು ವಿಜೇತ ಮೊತ್ತ + ಅನ್ವಯವಾಗುವ ತೆರಿಗೆಗಳನ್ನು 09-08-2023 ರಂದು ಅಥವಾ ಮೊದಲು ಪಾವತಿಸಬೇಕು, ವಿಫಲವಾದರೆ ಯಾವ ಬ್ಯಾಂಕ್ ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ • ಉದ್ದೇಶಿತ ಬಿಡ್‌ದಾರರು ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಹರಾಜು ಪೋರ್ಟಲ್‌ಗೆ ಭೇಟಿ ನೀಡಬಹುದು.

ಸ್ಥಳ: ಹುಬ್ಬಳ್ಳಿ
ದಿನಾಂಕ 08.08.2023

ಸಹಿ/- ಅಧಿಕೃತ ಅಧಿಕಾರಿ
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ